ಶಾಸನದ ೧೯೫೯ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ ಶಾಸನದ ೩೦ (ಎ)ಕಲಮನ್ನು ಮಾರ್ಪಾಡಿನೊಂದಿಗೆ ಶಾಸನದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ಅನ್ವಯಿಸುವುದರ ಬಗ್ಗೆ ದಿನಾಂಕ ೭-೩-೧೯೮೮ರಂದು ಹೊರಡಿಸಲಾದ ಸಿಎಂಡಬ್ಲ್ಯೂಸಿ ಸಿಎಲ್‌ಎಂ ೮೮ನೇ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಎಲ್ಲಾ ಕಾಗದ ಪತ್ರಗಳನ್ನೂ ಸಭೆಯ ಮುಂದಿಡಲಾಯಿತು.

ವರದಿಗಳನ್ನು ಒಪ್ಪಿಸುವುದು

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಅಧ್ಯಕ್ಷರು —ಸರ್ಕಾರಿ ಭರವಸೆಗಳ ಸಮಿತಿ).—ಮಾನ್ಯ ಅಧ್ಯಕ್ಷರೇ, ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಸರ್ಕಾರಿ ಭರವಸೆಗಳ ಸಮಿತಿಯ ೫ನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಶ್ರೀ ಡಿ. ಟಿ. ಜಯಕುಮಾರ್ (ಅಧ್ಯಕ್ಷರು — ಅಧೀನ ಶಾಸನ ರಚನಾ ಸಮಿತಿ).—ಮಾನ್ಯ ಅಧ್ಯಕ್ಷರೇ, ಅಧೀನ ಶಾಸನ ರಚನಾ ಸಮಿತಿಯ ಏಳು, ಎಂಟು, ಒಂಬತ್ತು ಹಾಗೂ ೧೦ನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಅರ್ಜಿಯನ್ನೊಪ್ಪಿಸುವುದು

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ಸುಳ್ಯ ವಿಧಾನ ಸಭಾ ಕ್ಷೇತ್ರಕ್ಕೆ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಸೌಲಭ್ಯ ಹಾಗೂ ಬೆಂಗಳೂರಿನಲ್ಲಿ ಸೆವಿಂ ಲಕ್ಷುರಿ ಬಸ್ಸಿಗೆ ಬುಕ್ಕಿಂಗ್ ಸೌಲಭ್ಯಕ್ಕೆ ಸಂಬಂಧಪಟ್ಟ ಮನವಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಒಪ್ಪಿಸಲಾಯಿತು.

ನಿಲುವಳಿ ಸೂಚನೆ ಪ್ರಸ್ತಾವಕ್ಕೆ ಅನುಮತಿ ಕೋರಿಕೆ

ರೈತರಿಗೆ ಹತ್ತಿ ಮತ್ತಿತರ ಬೀಜಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸದೇ ಇರುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ರೈತರಿಗೆ ಸಂಬಂಧಪಟ್ಟ ವಿಚಾರದಲ್ಲಿ ನಿಲುವಳಿ ಸೂಚನೆಯನ್ನು ತವಂಗೆ ಕೊಟ್ಟಿರುತ್ತೇನೆ. ಈಗ ತಮ್ಮ ಮನಸ್ಸನ್ನು ಈ ವಿಷಯವನ್ನು ಚರ್ಚಿಸಲು ಅವಕಾಶ ನೀಡಲು ತಮ್ಮ ಒಲಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ, ರಾಜ್ಯದಲ್ಲಿ ಸತತವಾಗಿ ಕಳೆದ ೪-೫ ವರ್ಷಗಳಿಂದಲೂ ಭೀಕರ ಬರಗಾಲವಿದ್ದು ಈಗ ಕೆಲವು ದಿವಸಗಳಿಂದ ಮಳೆಯಾಗುತ್ತಿದೆ. ಖುಷ್ಕಿ ಭೂಮಿಯಲ್ಲಿ, ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಇನ್ನು ೫-೬ ದಿವಸಗಳಲ್ಲಿ ಬಿತ್ತನೆ ಕೆಲಸ ಪ್ರಾರಂಭಿಸುವ ಮಟ್ಟದಲ್ಲಿ ರೈತರಿದ್ದಾರೆ ಆದರೆ, ಕೃಷಿ ಇಲಾಖೆಯಲ್ಲಿ ಬಿತ್ತನೆಗೆ ಯೋಗ್ಯವಾದ ಡಿ.ಸಿ.ಹೆಚ್. ಹತ್ತಿ ಬೀಜ, ಜೋವಾರ್, ಸೂರ್ಯಕಾಂತಿ ಬೀಜ ಅಗತ್ಯಕ್ಕೆ ಬೇಕಾದಷ್ಟು ಇಲ್ಲದೇ ಬಿತ್ತನೆ ಕಾರ್ಯಕ್ಕೆ ತೊಂದರೆಯಾಗಿದೆ. ಹೋದವರ್ಷ ಡಿ.ಸಿ.ಹೆಚ್. ಹತ್ತಿ ಬೆಳೆಗೆ ಒಳ್ಳೆಯ ಬೆಲೆ ಸಿಕ್ಕಿದ್ದರಿಂದ, ಹತ್ತಿ ಬಿತ್ತನೆ ಕಾರ್ಯವನ್ನು ರೈತರು ಪ್ರಾರಂಭಿಸುತ್ತಾರೆ. ದಾವಣಗೆರೆ ಮತ್ತಿತರೆ ಕಡೆಗಳಲ್ಲಿ ಬೀಜ ನಿಗಮದಿಂದ ರೈತರಿಗೆ ಬೀಜಗಳನ್ನು ಬೆಳೆಸುವಂತಹ ಪ್ರಯತ್ನ ಮಾಡಿದ್ದಾರೆ. ನನಗೆ ತಿಳಿದಿರುವ ಮಾಹಿತಿ ಪ್ರಕಾರ ಕೃಷಿ ಇಲಾಖೆಯವರು, ಬೀಜ ನಿಗಮದವರು, ಬೀಜಗಳನ್ನು ಬೆಳೆದಂತಹ ರೈತರು ಶಾಮೀಲಾಗಿ ಬೀಜ ನಿಗಮಕ್ಕೆ ಬೀಜಗಳನ್ನು ಕೊಡದೆ ಇವತ್ತು ರೈತರಿಗೆ ತೊಂದರೆಗೆ ಕಾರಣವಾಗಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿಂತೂ ಶಿಕಾರಿಪುರ ತಾಲ್ಲೂಕಿನಲ್ಲಿ ೧೫೦ ಕ್ವಿಂಟಾಲ್ ಬೀಜದ ಅವಶ್ಯಕತೆ ಇದ್ದರೆ ಕೇವಲ ೫೦ ಕ್ವಿಂಟಾಲ್ ಬೀಜವನ್ನು